

ದಯೆ ಇದ್ದರೆ ಅದು ಖಂಡಿತ ತಪ್ಪಿಹೋಗುವುದಿಲ್ಲ. ಹೋಗಿ ಬರುವ ಖರ್ಚಿಗೆ ಹಣವನ್ನು ಹೊಂದಿಸಿಕೊಳ್ಳುತ್ತೇನೆ' ಎಂದು ರಾಮ ಶಿವನಿಗೆ ಹೇಳಿದನು. ಆತ ಇಷ್ಟೆಲ್ಲಾ ಹೇಳಿದರೂ, ರಾಮ 'ನನ್ನ ಹೊಸಮನೆ ಕಟ್ಟುತ್ತಿರುವ ಕೆಲಸ ಮುಗಿಯುತ್ತಿಲ್ಲ. ಆ ಕೆಲಸವನ್ನು ಅರ್ಧದಲ್ಲೇ ಬಿಟ್ಟು ಹೋಗುವುದು ಹೇಗೆ? ಅಂಥ ಯೋಚನೆ ಮಾಡುತ್ತಿದ್ದೇನೆ' ಅಂದ.

ಆಗ ರಾಮನಿಗೆ ಶಿವ, 'ಏನೇನೋ ಕಾರಣಗಳನ್ನು ಒಡ್ಡಿ ನಾವು ಮಾಡಬೇಕಾದ ಪವಿತ್ರ ಕಾರ್ಯಗಳನ್ನು ಮುಂದೆ ಮುಂದೆ ಹಾಕುತ್ತಲೇ ಇರಬಾರದು. ಅದು ದೇವರ ಕಾರ್ಯ! ಹಾಗಾದರೆ ನಾವು ಹಿಡಿದ ಕಾರ್ಯ ಯಾವುದೂ ಕೈಗೂಡುವುದಿಲ್ಲ. ಈ ಬೇಸಿಗೆಯಲ್ಲಿ ನಾವು ಕಾಶಿಗೆ ಹೋಗಿ ಬರುವುದೇ ಒಳ್ಳೆಯದು!' ಎಂದ. ರಾಮ ಇನ್ನೂ ಏನೇನೋ ಗೊಣಗುತ್ತಲೇ ಇದ್ದ. ಆಗ ಶಿವ, 'ಉಳಿದಿರುವ ಕೆಲಸಗಳನ್ನೆಲ್ಲಾ ನಿನ್ನ ಮಗನಿಗೆ ವಹಿಸಿ ಬಾ. ನಾವು ಕಾಶಿಗೆ ಹೋಗಿ ಬರುವವರೆಗೂ ಅವನು ನೋಡಿಕೊಳ್ಳುತ್ತಾನೆ' ಎಂದು ಸಲಹೆ ಮಾಡಿದ. ಅದಕ್ಕೆ ರಾಮ, 'ನನ್ನ ಹಿರಿಮಗ ನಂಬಿಕೆಗೆ ಅರ್ಹನಲ್ಲ. ದೇಶಾಂತರ ಹೋದ ಮಗನಿದ್ದರೆ ನನಗೆ ಈ ಸಂಕಟ ಬರುತ್ತಿರಲಿಲ್ಲ. ನನ್ನ ಹಿರಿಮಗನಿಗೆ ಕೆಲವು ದುಶ್ಚಟಗಳಿವೆ. ಕುಡಿಯುತ್ತಾನೆ, ಇಸ್ಪೀಟ್ ಆಡ್ತಾನೆ. ಅದನ್ನು ಅವನಿಂದ ಬಿಡಿಸುವುದಕ್ಕೆ ಯಮ ಪ್ರಯತ್ನ ಮಾಡಿ ಕೊನೆಗೆ ನಾನೇ ಸೋತುಬಿಟ್ಟೆ' ಎಂದು ತನ್ನ ಅಸಹಾಯಕತೆಯನ್ನು ಹೇಳಿಕೊಂಡನು. ಆಗ ಶಿವ, 'ನಾವು ತೀರಿಕೊಂಡ ಮೇಲೆ ನಾವಿಲ್ಲದಿದ್ದರೂ ನಮ್ಮ ಮಕ್ಕಳು, ಸೊಸೆಯರು ಅವರವರ ಸಂಸಾರವನ್ನು ನಡೆಸಿಕೊಂಡು ಹೋಗುತ್ತಾರೆ. ನಮ್ಮ ಹೆಂಡತಿಯರು ತೀರಿಕೊಂಡ ಮೇಲೆ ನಾವೆಲ್ಲಾ ನಮ್ಮ ಸಂಸಾರವನ್ನು ನಡೆಸುತ್ತಿಲ್ಲವೆ? ಪ್ರಪಂಚದಲ್ಲಿ ಯಾರೂ ದಡ್ಡರಿಲ್ಲ! ಆ ನಿನ್ನ ಸೊಸೆ ತುಂಬಾ ಬುದ್ಧಿವಂತೆ. ಅವಳಿಗೂ ಒಬ್ಬಳು ಮಗಳಿದ್ದಾಳೆ. ನಿನ್ನ ಮಗನಿಗೂ ಸಂಸಾರ, ಕೆಲಸ ಅಂದರೆ ಏನು ಎಂಬುದು ಅರ್ಥವಾಗಲಿ, ಅನುಭವವಾಗಲಿ, ಅವನಿಗೆ ವಹಿಸಿ ಬಾ. ನಾವು ಇಂತಹ ನೆಪಗಳನ್ನೆಲ್ಲಾ ಹೇಳಿಕೊಂಡು ಕಾಶಿಯಾತ್ರೆಯ ಹರಕೆಯನ್ನು ತೀರಿಸದಿದ್ದರೆ ಮುಂದೆ ಯಾವ ಕೇಡು ಕಾದಿದೆಯೋ ಯಾರಿಗೆ ಗೊತ್ತು? ನಮ್ಮ ಬದುಕು ನಮ್ಮ ಕೈಯಲ್ಲಿದೆ ಎಂದುಕೊಳ್ಳುವುದೇ ಸುಳ್ಳು. ಅದು ನಮ್ಮನ್ನು ತನ್ನ ದಾರಿಯಲ್ಲಿ ನಡೆಸುತ್ತಿರುತ್ತದಷ್ಟೆ. ನಮ್ಮ ಕೈಕಾಲು ಗಟ್ಟಿ ಇದ್ದಾಗಲೇ ಕಾಶಿಗೆ ಹೋಗಿ ಬಂದು ಬಿಡುವಾ!' ಎಂದು ಸಲಹೆ ಮಾಡಿದನು.

ಹೀಗೆ ರಾಮ ಮತ್ತು ಶಿವ ತಂತಮ್ಮ ಮನೆಯ ಕೆಲಸಗಳನ್ನು ತಮ್ಮ ಮಕ್ಕಳು ತಾವು ಇಲ್ಲದಾಗ ಹೇಗೆ ನಿರ್ವಹಿಸಬೇಕು ಎಂಬುದರ ಬಗ್ಗೆ ಅವರಿಗೆ ತಿಳಿವಳಿಕೆ ನೀಡಿ ಕಾಶಿಗೆ ಹೋಗಲು ನಿರ್ಧರಿಸಿದರು. ಆಗ ಕಾಲ್ನಡಿಗೆಯಲ್ಲಿಯೇ ಕಾಶಿಗೆ ಹೋಗಿ ಬರಬೇಕಾಗಿತ್ತು. ಆಗಿನ್ನೂ ಅಲ್ಲಿಗೆ ಹೋಗಿ ಬರಲು ವಾಹನ ಸೌಲಭ್ಯಗಳು ಇರಲಿಲ್ಲ. ಅದು 'ಕಾಶಿಗೆ ಹೋಗಲಿಕ್ಕೆ ಏಸೊಂದು ದಿನ ಬೇಕಾ? ತಾಸು ಹೊತ್ತಿನ ತವರೂರ ದಾರಿಯಲಿ ಆಸಿ ಕುಂತವಳೆ ಹಡೆದವ್ವ' ಅನ್ನುವ ಜನಪದರ ಕಾಲ. ಅಷ್ಟು ದೂರ ಕಾಶಿಗೆ ನಡೆದು ಹೋಗಲು ಹಲವಾರು ದಿನಗಳು ಬೇಕು. ಆದರೆ ಅದರ ಬದಲು ತಾಸು ಸಮಯದ ದೂರದಲ್ಲಿರುವ ತವರಿಗೆ ಹೋಗಿ ತನ್ನ ಹಡೆದವ್ವನನ್ನು